4. ಗಮನ ಸೆಳೆಯುವ ಸೂಚನೆ

ವಿಷಯ:- ಯಲ್ಲಮ್ಮ ದೇವಿ ದೇವಸ್ಥಾನಕ್ಕೆ ಪ್ರಾಧಿಕಾರ ರಚನೆ ಮಾಡುವ ಕುರಿತು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ) :- ಮಾನ್ಯ ಅಧ್ಯಕ್ಷರೆ: ಅಫಜಲಪುರ ಮತಕ್ಷೇತ್ರದ ಮಣ್ಣೂರು ಗ್ರಾಮದ ಯಲ್ಲಮ್ಮ ದೇವಸ್ಥಾನವು ಭೀಮ ನದಿಯ ಮಧ್ಯದಲ್ಲಿದ್ದು ಮೇಲೆ ಬ್ಯಾರೇಜ್ ನಿರ್ಮಾಣವಾಗಿರುವುದರಿಂದ ಮುಳುಗಡೆ ಆಗುವ ಸ್ಥಿತಿಯಲ್ಲಿದೆ. ಇದಕ್ಕೆ ಪ್ರಾಧಿಕಾರ ರಚನೆ ಮಾಡುವ ಕುರಿತು ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಎಂ. ಕೃಷ್ಣಯ್ಯ ಶೆಟ್ಟಿ (ವಸತಿ ಮತ್ತು ಮುಜರಾಯಿ ಸಚಿವರು) :- ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕು, ಮಣ್ಣೂರು ಗ್ರಾಮದ ಶ್ರೀ ಯಲ್ಲಮ್ಮ ದೇವಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಇದರ ವಾರ್ಷಿಕ ಆದಾಯ ಅಂದಾಜು ರೂ.2.00 ಲಕ್ಷ ಹಾಗೂ ಖರ್ಚು ರೂ.1.50 ಲಕ್ಷಗಳಾಗಿರುತ್ತದೆ. ದೇವಸ್ಥಾನದ ನಿಧಿಯಲ್ಲಿ ಸಾಕಷ್ಟು ಹಣವಿರುವುದಿಲ್ಲ.

ಶ್ರೀ ಯಲ್ಲಮ್ಮ ದೇವಿ ದೇವಸ್ಥಾನವು ಭೀಮಾ ನದಿಯ ದಡದಲ್ಲಿದ್ದು, ಅದರ ಹಿಂಭಾಗದಲ್ಲಿ ಭೀಮಾ ಏತ ನೀರಾವರಿಗಾಗಿ ಬ್ಯಾರೇಜು ನಿರ್ಮಿಸಲಾಗಿದೆ. ಇದರಿಂದ ದೇವಸ್ಥಾನದ ಸುತ್ತಲೂ ನೀರು ಆವರಿಸಿಕೊಂಡಿರುವುದರಿಂದ ಬಿರುಕುಬಿಟ್ಟು ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ದೇವಾಲಯದ ನಿಧಿಯಲ್ಲಿ ಸಾಕಷ್ಟು ಹಣ ಇಲ್ಲದೇ ಇರುವುದರಿಂದ ದೇವಸ್ಥಾನದ ಸುತ್ತಲೂ ರಕ್ಷಣಾ ಗೋಡೆಯನ್ನು ನಿರ್ಮಿಸುವ ಬಗ್ಗೆ ನೀರಾವರಿ ಇಲಾಖೆ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯಲ್ಲಮ್ಮ ದೇವಿ ದೇವಸ್ಥಾನವು ಒಂದು ಬಿ ದರ್ಜೆಯ ದೇವಸ್ಥಾನವಾಗಿದ್ದು, ಪ್ರತಿ ವರ್ಷ ಮೇ ತಿಂಗಳಲ್ಲಿ 8 ದಿನಗಳ ಕಾಲ ನಡೆಯುವ ಜಾತ್ರಾ ಸಂದರ್ಭದಲ್ಲಿ ಮಾತ್ರ ಸುಮಾರು 10-15 ಸಾವಿರ ಭಕ್ತಾದಿಗಳು ದೇವಸ್ಥಾನಕ್ಕೆ ಭೇಟಿ ಕೊಡುತ್ತಿದ್ದು, ಉಳಿದ ದಿನಗಳಲ್ಲಿ ಭಕ್ತಾದಿಗಳ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ದೇವಸ್ಥಾನದ ವರಮಾನ ಕಡಿಮೆ ಇದ್ದು, ದೇವಸ್ಥಾನದಲ್ಲಿ ಭೇಟಿ ನೀಡುವ

ಭಕ್ತಾದಿಗಳ ಸಂಖ್ಯೆ ಕಡಿಮೆ ಇರುವುದರಿಂದ, ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವುದು ಸೂಕ್ತವೆನಿಸುವುದಿಲ್ಲ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರ ನಮಗೆ ತೃಪ್ತಿ ತಂದಿಲ್ಲ. ಇದರ ಬಗ್ಗೆ ಅವರು ಸಂಪೂರ್ಣವಾದ ಮಾಹಿತಿ ತರಿಸಿದ ಹಾಗೆ ಕಾಣುತ್ತಿಲ್ಲ. ಸನ್ಮಾನ್ಯ ಕುಮಾರಸ್ವಾಮಿಯವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರೇ ಆ ಸರ್ಕಾರದಲ್ಲಿದ್ದರು. ಮಣ್ಣೂರು ಗ್ರಾಮದಲ್ಲಿ ಗ್ರಾಮ ವಾಸ್ತವ್ಯವನ್ನು ಮಾಡಿದ್ದರು. ಸುವರ್ಣ ಗ್ರಾಮ ಯೋಜನೆ ಅಡಿಯಲ್ಲಿ ಆ ಗ್ರಾಮವನ್ನು ತೆಗೆದುಕೊಂಡಿದ್ದಾರೆ. ಯಲ್ಲಮ್ಮ ದೇವಸ್ಥಾನ ಒಂದು ಪ್ರಸಿದ್ಧವಾದ ದೇವಸ್ಥಾನ ಎನ್ನುವ ಇತಿಹಾಸ ಇರುವುದರ ಜೊತೆಗೆ ಅಲ್ಲಿ ಜೈನ ಬಸದಿಗಳಿವೆ. ಚನ್ನಕೇಶವ ದೇವಾಲಯಗಳಿವೆ. ಇವೆಲ್ಲಾ ಇರುವುದರಿಂದ ಈ ಪ್ರಾಧಿಕಾರದ ಅವಶ್ಯಕತೆ ಬಹಳ ಇದೆ. ಏತ ನೀರಾವರಿ ಯೋಜನೆಯಿಂದ ಸಂಪೂರ್ಣವಾಗಿ ಅಲ್ಲಿ ನೀರು ತುಂಬತಕ್ಕಂತಹ ಒಂದು ವಾತಾವರಣ ನಿರ್ಮಾಣವಾಗಿರುವುದರಿಂದ ಭಕ್ತಾಧಿಗಳು ಅಲ್ಲಿಗೆ ಹೋಗುವುದಕ್ಕಾಗಿ ಅಲ್ಲಿ ಒಂದು ಬ್ರಿಡ್ಜ್ ನಿರ್ಮಾಣ ಮಾಡ ಬೇಕಾಗಿದೆ. ಸುಮಾರು 100 ರಿಂದ 150 ಮೀಟರ್‌ನಷ್ಟು ಸೇತುವೆ ಮಾಡಬೇಕಾಗುತ್ತದೆ. ಪ್ರಾಧಿಕಾರ ಮಾಡುವುದು ಬಹಳ ಅವಶ್ಯಕತೆ ಇದೆ. ಮಾನ್ಯ ಮುಜರಾಯಿ ಸಚಿವರಿಗಿಂತ ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಒಳ್ಳೆಯದು. ಜವಾಬ್ದಾರಿಯುತ ಸಚಿವರು ಅವರು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ಈ ದೇವಸ್ಥಾನಕ್ಕೆ ಪ್ರಾಧಿಕಾರವನ್ನು ರಚನೆ ಮಾಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಆದಾಯದ ಬಗ್ಗೆ ಕೂಡ ಅವರ ಉತ್ತರ ನೋಡಿದ್ದೇನೆ. ಅದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ.

ಶ್ರೀ ಎ.ಎನ್. ಕೃಷ್ಣಯ್ಯ ಶೆಟ್ಟಿ (ವಸತಿ ಮತ್ತು ಮುಜರಾಯಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಆದಾಯದ ಆಧಾರದ ಮೇಲೆ ಖಚಿತ ಮಾಹಿತಿಯೊಂದಿಗೆ ಮಾತನಾಡಿದ್ದೇನೆ. ಲಕ್ಷಾಂತರ ಭಕ್ತರು ಬರುವಂತಹ ಕ್ಷೇತ್ರಗಳಲ್ಲಿ ಇನ್ನೂ ಕೂಡ ಪ್ರಾಧಿಕಾರ ರಚನೆ ಮಾಡಿಲ್ಲ. ಇಲ್ಲಿ ತಡೆಗೋಡೆ ನಿರ್ಮಾಣ ಮಾಡುವುದಕ್ಕಾಗಿ ಒಂದು ಪ್ರಾಧಿಕಾರ ರಚನೆ ಮಾಡಬೇಕೆಂದರೆ, ನಮ್ಮ ಪ್ರಕಾರ ಅದರ ಅವಶ್ಯಕತೆ ಇಲ್ಲ. ತಡೆಗೋಡೆಯನ್ನು ಕಟ್ಟುವಂತಹ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಆ ದೇವಸ್ಥಾನದ ಅಭಿವೃದ್ಧಿಗೆ ಏನೆಲ್ಲಾ ಮಾಡಬೇಕು, ಅದನ್ನು ಮಾಡುವುದಕ್ಕೆ ನಾವು ಬದ್ಧರಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, HKDB ಮತ್ತು ನೀರಾವರಿ ಇಲಾಖೆಯ ಜೊತೆಯಲ್ಲಿ ಚರ್ಚೆ ಮಾಡಿ ಆ ಮೇಲೆ ಅಭಿವೃದ್ಧಿ ಕೆಲಸದ ಬಗ್ಗೆ ನಾವು ಹೇಳುತ್ತೇವೆಂದು ಹೇಳಿದ್ದೀರಿ. ಅದರ ಅವಶ್ಯಕತೆ ಇಲ್ಲ.

ಏಕೆಂದರೆ ಇದು ಕೃಷ್ಣಾ ಜಲ ಭಾಗ್ಯ ನಿಗಮದಲ್ಲಿ ಆ ಯೋಜನೆ ಇದ್ದ ಕಾರಣ ಅವರಿಂದಲೆ ಹಣವನ್ನು ಪಡೆದುಕೊಂಡು ಅದಕ್ಕೆ protection wall ಕಟ್ಟಿಸಿಕೊಡತಕ್ಕಂಥದ್ದು ಆಗುತ್ತದೆ. ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ದುಡ್ಡೇ ಇಲ್ಲ, ಇಷ್ಟು ಹಣವನ್ನು ಕೊಡುವಷ್ಟು ಶಕ್ತಿ ಅದಕ್ಕೆ ಇಲ್ಲವೂ ಇಲ್ಲ. ಅದಕ್ಕಾಗಿ ಕೃಷ್ಣಾ ಜಲ ಭಾಗ್ಯ ನಿಗಮದವರ ಜೊತೆಯಲ್ಲಿ ಮಾತನಾಡಿ ಅವರಿಗೆ ಹೇಳಿ ಇದನ್ನು ಕಟ್ಟಿಸಲೇಬೇಕೆಂದು ಹೇಳುವಂಥದ್ದನ್ನು ನೀವು ಮಾಡಿದರೆ ಈ ಕೆಲಸ ತಕ್ಷಣ ಆಗುತ್ತದೆ. ಏಕೆಂದರೆ ಇದೇ ರೀತಿಯಾಗಿ ಬಾಗಲಕೋಟೆಯಲ್ಲಿ ಅನೇಕ ದೇವಸ್ಥಾನಗಳು ಏನು ಮುಳುಗಡೆಯಾಗಿವೆ ಅದಕ್ಕೆ ನಮ್ಮ ಕೃಷ್ಣಾ ಜಲಭಾಗ್ಯ ನಿಗಮದ ವತಿಯಿಂದಲೇ ಹಣವನ್ನು ಕೊಟ್ಟಿದ್ದು. ನಾರಾಯಣಪುರ ಡ್ಯಾಂನಲ್ಲಿ ಮುಳುಗಡೆಯಾಗಿರತಕ್ಕಂಥದ್ದಕ್ಕೂ ಹಣವನ್ನು ಕೊಟ್ಟಿದೆ. ಎಲ್ಲಾ ಪ್ರಾಜೆಕ್ಟ್‌ಗಳ ಕೆಳಗೆ ಇಲ್ಲಾ ಕರ್ನಾಟಕ ಜಲಭಾಗ್ಯ ನಿಗಮ ಅಥವಾ ಕೃಷ್ಣಾ ಜಲಭಾಗ್ಯ ನಿಗಮ ಅಥವಾ ಕಾವೇರಿ ನೀರಾವರಿ ನಿಗಮ, ಇಂಥ ನಿಗಮಗಳಿಂದಲೇ ಎಲ್ಲೆಲ್ಲಿ ನೀರಾವರಿ ವಿಷಯದಲ್ಲಿ ಜಮೀನುಗಳು ಮುಳುಗಡೆಯಾಗಿವೆ ಅವಕ್ಕೆ ನಿಗಮಗಳೇ ಹಣವನ್ನು ಖರ್ಚು ಮಾಡುತ್ತವೆ. ಆದುದರಿಂದ ನೀವು ಅವರ ಜೊತೆಯಲ್ಲಿ ಮಾತನಾಡಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಸಾಕಷ್ಟು ಹಣ ಉಳಿದಿದೆ. ಇಡೀ ರಾಜ್ಯದಲ್ಲಿ ನೀವು ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡಿದಂಥ ಹಣ 25% ಎಂದು ನಿನ್ನೆ ನೀವೆಯೇ ಒಪ್ಪಿಕೊಂಡಿದ್ದೀರಿ. So, ಅದಕ್ಕಾಗಿ ತಕ್ಷಣ ಆ ಹಣವನ್ನು ಅವರ ಬಳಿ ಇರತಕ್ಕಂಥದ್ದನ್ನು ನೀವು ಉಪಯೋಗ ಮಾಡಿ ಅಲ್ಲಿ construction ಮಾಡಬೇಕು ಎಂದು ಆದೇಶ ಕೊಟ್ಟರೆ, ಅಥವಾ ಅವರನ್ನು ನೀವು ಕರೆಸಿ ಅವರಿಗೆ ಹೇಳಿದರೆ ಅವರು ಮಾಡುತ್ತಾರೆ.

ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ (ಧಾರ್ಮಿಕ ದತ್ತಿ ಇಲಾಖಾ ಸಚಿವರು) :-ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರ ಒಂದು ಸಲಹೆಯನ್ನು ಆದಷ್ಟು ಬೇಗ ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ಹಿಂದೆ ಅಲ್ಲಿಗೆ ಬಂದು Promise ಮಾಡಿ ಬಂದಿದ್ದಾರೆ. ಅವರು ಕೂಡ ಈ ವಿಷಯದ ಬಗ್ಗೆ ಮಾತನಾಡುತ್ತಾರೆ. ಅವರು ಮಾತನಾಡಿದ ನಂತರ ಸಚಿವರು ಉತ್ತರ ಹೇಳಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈಗೇನು ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು ಅವರ ತಾಲ್ಲೂಕಿನ ಮಣ್ಣೂರು ಗ್ರಾಮದ ಯಲ್ಲಮದೇವಿ ದೇವಸ್ಥಾನದ ವಿಷಯದಲ್ಲಿ ಏನು ಗಮನವನ್ನು ಸೆಳೆದಿದ್ದಾರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಆ ಗ್ರಾಮಕ್ಕೆ ಹೋಗಿ ಗ್ರಾಮ ವಾಸ್ತವ್ಯದ ಕಾರ್ಯಕ್ರಮಕ್ಕೆ ಹೋಗಿದ್ದೆ. ಈಗಾಗಲೇ ಸುವರ್ಣ ಗ್ರಾಮೋದಯದ ಕಾರ್ಯಕ್ರಮದಡಿಯಲ್ಲಿ ಬಂದಿದೆ. ಈ ಗ್ರಾಮ ಪ್ರತಿ ವರ್ಷವೂ, ಅದರಲ್ಲಿಯೂ ವಿಶೇಷವಾಗಿ ಈ ದೇವಸ್ಥಾನ ನೀರಿನಿಂದ ಜಲಾವೃತವಾಗುತ್ತಿದೆ. ಈ ವಿಚಾರವಾಗಿ ಮಾನ್ಯ ಸದಸ್ಯರು ಇವತ್ತು ಏನು ಗಮನವನ್ನು ಸೆಳೆದಿದ್ದಾರೆ, ಆ ವಿಚಾರವಾಗಿ ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡುತ್ತೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸದನದ ಗಮನವನ್ನು ಸೆಳೆದಿದ್ದಾರೆ, ಇದಕ್ಕೆ ಧಾರ್ಮಿಕ ಇಲಾಖೆಯಿಂದಲಾದರೂ ಸರಿ ಅಥವಾ ಬೇರೆ ಇನ್ಯಾವುದಾದರೂ ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನಿಂದಲಾದರೂ ಸರಿ ಅಥವಾ ಕೃಷ್ಣಾ ಜಲಭಾಗ್ಯ ನಿಗಮದಿಂದಲಾದರೂ ಸರಿ ತಕ್ಷಣವೇ ಕ್ರಮ ತೆಗೆದುಕೊಂಡರೆ ಅಲ್ಲಿ ಪ್ರತಿ ವರ್ಷ ಜಲಾವೃತವಾಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯಾದ ಕಾರಣ ದಯವಿಟ್ಟು ಆದ್ಯತೆ ಮೇಲೆ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಮಾಲೀಕಯ್ಯ ಗುತ್ತೇದಾರ್ ಪರವಾಗಿ ಸದನದಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಈ ಸರ್ಕಾರ ಯಾರೂ ಮಾಡಲಾರದಷ್ಟು ಘೋಷಣೆಗಳನ್ನು ಮಾಡಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ ಮತ್ತು ಕೇಳಿದ್ದೇವೆ. ಮಠಗಳಿಗೆ ಮತ್ತು ಬಹಳಷ್ಟು ದೇವಸ್ಥಾನಗಳಿಗೆ ಕೋಟಿಗಟ್ಟಲೆ ಹಣವನ್ನು ಕೊಡುವುದಾಗಿ ಅನೌನ್ಸ್ ಮಾಡಿದ್ದಾರೆ. ಇಲ್ಲಿ ಬಹಳ ಅತಿ ಅವಶ್ಯಕವಾಗಿ ಪ್ರಾಧಿಕಾರ ರಚನೆಯಾಗಬೇಕಾಗಿರುವುದರಿಂದ ನಾನು ಈ ಸದನದ ಗಮನಕ್ಕೆ ಸದರಿ ವಿಷಯವನ್ನು ತಂದಿದ್ದೇನೆ. ಪ್ರಾಧಿಕಾರ ರಚನೆಯಾದರೆ ಅಲ್ಲಿ ಬಹಳ ಅನುಕೂಲವಾಗುತ್ತದೆ. ಕೃಷ್ಣಾ ಜಲಭಾಗ್ಯ ನಿಗಮದಿಂದ ಅಲ್ಲಿ ಬ್ರಿಡ್ಜ್ ಮಾಡಲಿ. ಆದರೆ ಪ್ರಾಧಿಕಾರ ಕೂಡ ಆಗಬೇಕು. ಏಕೆಂದರೆ ಅಲ್ಲಿ ಬಸದಿಗಳಿವೆ, ಜೈನ್ ಟೆಂಪಲ್ ಇದೆ, ಪದ್ಮಾವತಿ ಟೆಂಪಲ್ ಇದೆ. ಆದುದರಿಂದ ದಯವಿಟ್ಟು ಅದರ ಬಗ್ಗೆ ಗಮನಹರಿಸಬೇಕು.

ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ (ಧಾರ್ಮಿಕ ದತ್ತಿ ಇಲಾಖಾ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ.

<u>ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎನ್.ಸಂಪಂಗಿ ಇವರು ನಿಯಮ 73ರಡಿಯಲ್ಲಿ ಕೇಳಿರುವ ಗಮನಸೆಳೆಯುವ ಸೂಚನೆ ಸಂಖ್ಯೆ 26ಕ್ಕೆ ಉತ್ತರ.</u>

ಪ್ರಶ್ನೆ :-

ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ದೊಡ್ಡಬಳ್ಳಾಪುರ ಈ ಪ್ರದೇಶಗಳಲ್ಲೂ ಅಧಿಕವಾದ ಫ್ಲೋರೈಡ್ ಇರುವ ನೀರು ಇರುವುದರಿಂದ ಕಾವೇರಿ ಮೂಲದಿಂದಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಸಭೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ :-

ಚಿಕ್ಕಬಳ್ಳಾಪುರ :- ಚಿಕ್ಕಬಳ್ಳಾಪುರ ನಗರವು ಜಿಲ್ಲಾ ಕೇಂದ್ರವಾಗಿದ್ದು ಜಕ್ಕಲಮಡಗು ಜಲಾಶಯದಿಂದ ಸುಮಾರು 1.00 ದಶಲಕ್ಷ ಲೀಟರ್ ನೀರು ಮತ್ತು 75 ಕೊಳವೆ ಬಾವಿಗಳಿಂದ ಸುಮಾರು 2.40 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡುತ್ತಿದ್ದು, ಪ್ರಸ್ತುತ 4 ದಿನಕ್ಕೊಮ್ಮೆ ತಲಾ ದಿನಂಪ್ರತಿ 50 ಲೀಟರ್ ನೀರನ್ನು ನಗರಸಭೆ ವತಿಯಿಂದ ಸರಬರಾಜು ಮಾಡಲಾಗುತ್ತಿದೆ. ಚಿಕ್ಕಲಮಡಗು ಜಲಾಶಯದಿಂದ ನೀರು ಸರಬರಾಜು ಮಾಡುವ 2ನೇ ಹಂತದ ಯೋಜನೆಯನ್ನು ರೂ.27.00 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯ ಅನುಷ್ಠಾನದ ನಂತರ ಕಲಾ ದಿನಂಪ್ರತಿ 100 ಲೀಟರ್ ನಂತೆ ಸರಬರಾಜು ಮಾಡಲಾಗುತ್ತಿದೆ.

ಬಾಗೇಪಲ್ಲಿ :- ಬಾಗೇಪಲ್ಲಿ ಪಟ್ಟಣಕ್ಕೆ ಚಿತ್ರಾವತಿ ಬ್ಯಾರೇಜ್‌ನಿಂದ ನೀರನ್ನು ಪಡೆದು, ಶುದ್ಧೀಕರಿಸಿ, ಮಾರ್ಚ್ - 2006 ರಿಂದ 1.70 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು, ಪ್ರಸ್ತುತ ಸರಬರಾಜಿನ ಪ್ರಮಾಣವು ದಿನಂಪ್ರತಿ ತಲಾ 70 ಲೀಟರ್‌ನಂತೆ

ಇರುತ್ತದೆ. ನೀರು ಸರಬರಾಜು ನಿರ್ವಹಣೆಯನ್ನು ಪಟ್ಟಣ ಪಂಚಾಯತ್ ರವರು ನಿರ್ವಹಿಸಿರುತ್ತಾರೆ. ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ.

ಗುಡಿಬಂಡೆ :- ಕೊಳವೆ ಬಾವಿಯ ನೀರಿನಲ್ಲಿ ಅಧಿಕ ಫ್ಲೋರೈಡ್ ಅಂಶವಿರುವುದರಿಂದ ಗುಡಿಬಂಡೆ ಪಟ್ಟಣಕ್ಕೆ ಚಿತ್ರಾವತಿ ಬ್ಯಾರೇಜ್‌ನಿಂದ ನೀರನ್ನು ಪಡೆದು, ಶುದ್ಧೀಕರಿಸಿ, ಮಾರ್ಚ್ 2006 ರಿಂದ 0.70 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು, ತಲಾ ದಿನಂಪ್ರತಿ 70 ಲೀಟರ್‌ನಂತೆ ನೀರು ಸರಬರಾಜು ಮಾಡಲಾಗುತ್ತಿದ್ದು, ಅದರ ನಿರ್ವಹಣೆಯನ್ನು ಪಟ್ಟಣ ಪಂಚಾಯತ್‌ರವರು ನಿರ್ವಹಿಸುತ್ತಿದ್ದಾರೆ. ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ.

ಗೌರಿಬಿದನೂರು :- ಗೌರಿಬಿದನೂರು ಪಟ್ಟಣಕ್ಕೆ 29 ಕೊಳವೆ ಬಾವಿಗಳಿಂದ ಸುಮಾರು 1.5 ದಶಲಕ್ಷ ಲೀಟರ್ ನೀರು ಸರಬರಾಜು ಮಾಡುತ್ತಿದ್ದು ಪ್ರಸ್ತುತ ದಿನ ಬಿಟ್ಟ ದಿನ ತಲಾ 42 ಲೀಟರ್ ನಂತೆ ಪುರಸಭೆಯರೇ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮ ಪಡಿಸಲು ಉತ್ತರ ಪಿನಾಕಿನಿ ಮೂಲದಿಂದ ನೀರು ಸರಬರಾಜು ಮಾಡುವ ರೂ.499 ಲಕ್ಷಗಳ ಯೋಜನೆಗೆ ದಿನಾಂಕ : 13-08-2008ರಲ್ಲಿ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಯೋಜನೆಯ ಅನುಷ್ಠಾನದ ನಂತರ ಪಟ್ಟಣಕ್ಕೆ ದಿನಂಪ್ರತಿ ತಲಾ 100 ಲೀಟರ್ ನಂತೆ ನೀರು ಸರಬರಾಜು ಮಾಡಲಾಗುವುದು.

ದೊಡ್ಡಬಳ್ಳಾಪುರ :- ದೊಡ್ಡಬಳ್ಳಾಪುರ ಪಟ್ಟಣಕ್ಕೆ 120 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡುತ್ತಿದ್ದು, ನಗರಸಭೆಯರೇ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ಜಕ್ಕಲಮಡಗು ಜಲಾಶಯವನ್ನು 260 MLD ಯಿಂದ 4390 MLD ಗೆ ಪರಿಷ್ಕರಿಸಿ ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರ ಪಟ್ಟಣಗಳಿಗೆ ನೀರು ಸರಬರಾಜು ಮಾಡಲು ಸರ್ಕಾರದಿಂದ ರೂ.2249.68 ಮತ್ತು 2700.00 ಲಕ್ಷಗಳಿಗೆ ಅನುಕ್ರಮವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ದೊಡ್ಡಬಳ್ಳಾಪುರ ನೀರು ಸರಬರಾಜು ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿ ಪ್ರಗತಿಯಲ್ಲಿದೆ. ಜಕ್ಕಲಮಡಗು ಜಲಾಶಯ ನಿರ್ಮಾಣಕ್ಕೆ ಚಿಕ್ಕಬಳ್ಳಾಪುರ ಪುರಸಭೆ ಮತ್ತು ಚಿಕ್ಕಬಳ್ಳಾಪುರ ಜನರಿಂದ ಇದ್ದ ಅಡಚಣೆ ನಿವಾರಿಸಲಾಗಿದ್ದು,

ಚಿಕ್ಕಬಳ್ಳಾಪುರ ನಗರ ಸಭೆಯಿಂದ ಜಲಾಶಯ ನಿರ್ಮಾಣಕ್ಕೆ ದಿನಾಂಕ : 12-01-2009 ರಂದು ಅನುಮತಿ ನೀಡಿದೆ. ಈ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕಾಮಗಾರಿಯನ್ನು 9 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಜಲಾಶಯದ ನಿರ್ಮಾಣದ ನಂತರ ದೊಡ್ಡಬಳ್ಳಾಪುರ ಪಟ್ಟಣಕ್ಕೆ ಜಕ್ಕಲಮಡಗು ಜಲಾಶಯದಿಂದ ನೀರನ್ನು ಪಡೆದು ಸರಬರಾಜು ಮಾಡಲಾಗುವುದು.

ಮೇಲ್ಕಂಡ ಚಿಕ್ಕಬಳ್ಳಾಪುರ ಜಿಲ್ಲೆಗೆ ಹಾಗೂ ಜಿಲ್ಲೆಯ ಇತರೆ ತಾಲ್ಲೂಕುಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಾಗಿರುವುದರಿಂದ ಈ ಕೇಂದ್ರ ಸ್ಥಾನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ದೊಡ್ಡಬಳ್ಳಾಪುರ, ಈ ಪ್ರದೇಶಗಳಲ್ಲೂ ಅಧಿಕವಾದ ಫ್ಲೋರೈಡ್ ಇರುವ ನೀರು ಇರುವುದರಿಂದ ಕಾವೇರಿ ಮೂಲದಿಂದಲೇ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಸಭೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

(ಮಾನ್ಯ ಸಚಿವರ ಉತ್ತರದ ಪ್ರತಿಯನ್ನು ಲಗತ್ತಿಸಿದೆ.)

ಶ್ರೀ ಎನ್. ಸಂಪಂಗಿ :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಕಳೆದ ಜೂನ್‌ನಲ್ಲಿ ನಡೆದಂಥ ವಿಧಾನಸಭೆ ಅಧಿವೇಶನದಲ್ಲಿ ಇದೇ ಗಮನವನ್ನು, ಇದೇ ಪ್ರಶ್ನೆಯನ್ನು ನಗರಾಭಿವೃದ್ಧಿ ಸಚಿವರಿಗೆ ಹಾಕಿದ್ದೆ. ಅವತ್ತು ಗಮನ ಸೆಳೆದಾಗ ಅದಕ್ಕೆ ಉತ್ತರವನ್ನು ಕೊಟ್ಟಿದ್ದರು. ಆದರೆ ಸದನವನ್ನು ಆಗ